**ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ ಪ್ರಕರಣ 23**
**ಎಟಿಎಂ ಗಳ ಮೂಲಕ ಮೂರನೆಯ ಪಕ್ಷಕಾರನಿಗೆ ನಿಧಿಗಳ ವರ್ಗಾವಣೆ**

ಡಿಬಿಒಡಿ. ಸಂಖ್ಯೆ.ಬಿಎಲ್.ಬಿಸಿ.5/22.01.001/2003 ಜುಲೈ 23, 2003

ಶ್ರಾವಣ 01, 1925 (ಶಕ)

ಎಲ್ಲ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಗೆ
(ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳನ್ನು ಮತ್ತು ಸ್ಥಳೀಯ ಬ್ಯಾಂಕುಗಳನ್ನು ಹೊರತುಪಡಿಸಿ)

ಮಾನ್ಯರೇ,

**ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ ಪ್ರಕರಣ 23**
**ಎಟಿಎಂ ಗಳ ಮೂಲಕ ಮೂರನೆಯ ಪಕ್ಷಕಾರನಿಗೆ ನಿಧಿಗಳ ವರ್ಗಾವಣೆ**

ಸ್ವಯಂ ಚಾಲಿತಗೊಳಿಸಿ ಟೆಲ್ಲರ್ ಯಂತ್ರಗಳನ್ನು ಒದಗಿಸುವಂಥ ಕಾರ್ಯಗಳ ಬಗ್ಗೆ ದಿನಾಂಕ ಜುಲೈ 18, 2002 ರಂದು ಹೊರಡಿಸಿದ ನಮ್ಮ ಪ್ರಧಾನ ಸುತ್ತೋಲೆ ಸಂಖ್ಯೆ ಡಿಬಿಒಡಿ. ಸಂಖ್ಯೆ.ಬಿಎಲ್.ಬಿಸಿ.5/22.01.001/2002ನ್ನು ದಯವಿಟ್ಟು ನೋಡಿ. ಅದರಲ್ಲಿ ಅಂತರ ಖಾತೆ ವರ್ಗಾವಣೆಯನ್ನು ಒಂದೇ ಕೇಂದ್ರದಲ್ಲಿನ ಅಥವಾ ಬೇರೆ ಬೇರೆ ಕೇಂದ್ರಗಳಲ್ಲಿನ ಒಬ್ಬನೇ ಗ್ರಾಹಕನ ಖಾತೆಗೆ ಮಾತ್ರ ನಿರ್ಬಂಧಿಸತಕ್ಕದ್ದೆಂದು ನಿರ್ದಿಷ್ಟಪಡಿಸಲಾಗಿದೆ.

2. ಬ್ಯಾಂಕುಗಳಿಂದ ಬಂದ ಕೋರಿಕೆಗಳನ್ನು ಆಧರಿಸಿ, ಎಟಿಎಂ ಗಳ ಮೂಲಕ, ದೇಶದೊಳಗಿರುವ ಒಂದೇ ಬ್ಯಾಂಕಿನಲ್ಲಿರುವ ಒಬ್ಬ ಗ್ರಾಹಕನ ಖಾತೆಯಿಂದ ಮತ್ತೊಬ್ಬ ಗ್ರಾಹಕನ ಖಾತೆಗೆ ನಿಧಿಗಳನ್ನು ವರ್ಗಾಯಿಸುವ ಸೌಲಭ್ಯವನ್ನು ಒದಗಿಸಲು ಬ್ಯಾಂಕುಗಳಿಗೆ ಅನುಮತಿ ನೀಡಲು ನಿರ್ಧರಿಸಲಾಗಿದೆ. ಎಟಿಎಂ ಗಳ ಮೂಲಕ ನಡೆಸಲಾದ ಅಂಥ ವ್ಯವಹಾರಗಳಿಗೆ ಹಣ ಸಂದಾಯಗಳನ್ನು ಮಾಡುವಂಥ ಆಧಾರವನ್ನು ಕಲ್ಪಿಸುವಂಥ ಆದೇಶ ಪತ್ರ ಮತ್ತು ಸಂಬಂಧಿಸಿದ ದಸ್ತಾವೇಜೀಕರಣವನ್ನು(ಡಾಕ್ಯುಮ್0ಟೇಷನನ್ನು) ಬ್ಯಾಂಕು ಮತ್ತು ಗ್ರಾಹಕರ ನಡುವೆ ದ್ವಿಪಕ್ಷೀಯ ಮಾತುಕತೆಗಳ ಮೂಲಕ ಇತ್ಯರ್ಥಪಡಿಸತಕ್ಕದ್ದು ಹಾಗೂ ಪ್ರತಿಯೊಬ್ಬ ವ್ಯಕ್ತಿಯ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಆಜ್ಞಾಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿರತಕ್ಕದ್ದು. ಎಟಿಎಂಗಳ ಮೂಲಕ ಮೂರನೆಯ ವ್ಯಕ್ತಿಯ ಸಂದಾಯಗಳಿಗೆ ಅನುಮತಿ ನೀಡುವಾಗ ಬ್ಯಾಂಕುಗಳು ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸುವಂತೆ ನೋಡಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

3. ಅಲ್ಲದೆ, " ಗಣಕೀಕೃತ ಪರಿಸರದಲ್ಲಿ ಅತ್ಯುತ್ತಮ ಪದ್ಧತಿಗಳ ಸಂಗ್ರಹ"ದಲ್ಲಿ ಮತ್ತು "ಅಂತರ್ಜಾಲ ಬ್ಯಾಂಕಿಂಗ್ ಕುರಿತ ಕಾರ್ಯನಿರ್ವಹಣಾ ತಂಡ" ದ ವರದಿಯಲ್ಲಿ ನಿರೂಪಿಸಿರುವ ಮಾರ್ಗಸೂಚಿಗಳಲ್ಲಿ ಆರ್‌ಬಿಐ ಬ್ಯಾಂಕುಗಳಿಗೆ ಸಲಹೆ ಮಾಡಿರುವಂತೆ ಅಗತ್ಯ ಭದ್ರತಾ ವ್ಯವಸ್ಥೆಗಳನ್ನು ಜಾರಿಗೆ ತರುವಂತೆಯೂ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

ಬ್ಯಾಂಕುಗಳು, ದಿನಾಂಕ 4 ನೇ ಫೆಬ್ರವರಿ 1998ರ ಸುತ್ತೋಲೆ ಡಿಬಿಎಸ್.ಸಿಓ.ಐಟಿಸಿ.ಬಿಸಿ10/31.09.001/97-98 ರಲ್ಲಿ ನೀಡಿರುವ ನಮ್ಮ ಮಾರ್ಗದರ್ಶನ ಟಿಪ್ಪಣಿಯನ್ನು ಹಾಗೂ ದಿನಾಂಕ 14ನೇ ಜೂನ್ 2001 ರ ಸುತ್ತೋಲೆ ಡಿಬಿಓಡಿ. ಸಿಓಎಂಪಿ.ಬಿಸಿ. ಸಂಖ್ಯೆ. 130/07.03.23/2000-01 ರ ಮಾರ್ಗಸೂಚಿಗಳನ್ನು ಹಾಗೂ "ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ" ಸೂತ್ರಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಸಹಾ ಪಾಲಿಸತಕ್ಕದ್ದು.

4. ಅದರಂತೆ, ಎಟಿಎಂಗಳಲ್ಲಿ ಒದಗಿಸತಕ್ಕ ಕಾರ್ಯಗಳಿಗೆ ಸಂಬಂಧಿಸಿದಂತೆ ದಿನಾಂಕ ಜುಲೈ 18, 2002ರ ಪ್ರಧಾನ ಸುತ್ತೋಲೆ ಡಿಬಿಓಡಿ.ಬಿಎಲ್.ಬಿಸಿ.5/22.01.001/2002 ಪ್ಯಾರಾ 12.3ರ ವಾಕ್ಯವನ್ನು "ಅಂತರ ಖಾತೆ ವರ್ಗಾವಣೆಯನ್ನು ದೇಶದೊಳಗಿನ ಒಂದೇ ಕೇಂದ್ರದಲ್ಲಿನ ಅಥವಾ ಬೇರೆ ಬೇರೆ ಕೇಂದ್ರಗಳಲ್ಲಿ ಇರುವ ಬ್ಯಾಂಕಿನ ಒಬ್ಬನೇ ಗ್ರಾಹಕನ ಅಥವಾ ಬೇರೆ ಬೇರೆ ಗ್ರಾಹಕರುಗಳ ಖಾತೆಗಳಿಗೆ ನಿರ್ಬಂಧಿಸಲಾಗಿದೆ" ಎಂದು ತಿದ್ದುಪಡಿ ಮಾಡಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/-
(ಸಿ.ಆರ್. ಮುರುಳೀಧರನ್)
ಮುಖ್ಯ ಪ್ರಧಾನ ವ್ಯವಸ್ಥಾಪಕ.

ಹಿಂಬರಹ: ಡಿಬಿಓಡಿ ಸಂಖ್ಯೆ. ಬಿಎಲ್ /22.01.001/2003, ದಿನಾಂಕ --------
ಪ್ರತಿಯನ್ನು ಮಾಹಿತಿಗಾಗಿ ಮತ್ತು ಅವಶ್ಯ ಕ್ರಮಕ್ಕಾಗಿ ಎಲ್ಲಾ ಪ್ರಾದೇಶಿಕ ಕಚೇರಿಗಳಿಗೆ ರವಾನಿಸಲಾಗಿದೆ.

(ಆರ್. ಸಿ. ಮಿಟ್ಟಲ್)
ಪ್ರಧಾನ ವ್ಯವಸ್ಥಾಪಕ.